Plan ಅಡಿಯಲ್ಲಿ ವಿವಿಧ ದೌರ್ಜನ್ಯಗಳಿಗೆ ಮಂಜೂರು ಮಾಡಬೇಕೆಂದು ನಮೂದಿಸಲಾದ ಮಾನದಂಡಗಳ ಮೇಲೆ ಪರಿಹಾರ ಮಂಜೂರು ಮಾಡಲಾಗುತ್ತಿದೆ.

ಉ. ಸರ್ಕಾರದ ಮನೆಗಳ್ನು ಪಡೆದುಕೊಂಡ 99 ಪರಿಶಿಷ್ಟ ಜಾತಿ ಕುಟುಂಬಗಳ ಪೈಕಿ 22 ಕುಟುಂಬದವರು ವೈಯಕ್ತಿಕ ಕಾರಣಗಳಿಂದ ತಾತ್ಕಾಲಿಕವಾಗಿ ಮನೆಗಳನ್ನು ಬಿಟ್ಟಿರುತ್ತಾರೆ. ಈಗ ಮನೆ ಸದರಿ 22 ಕುಟುಂಬಗಳ ಪೈಕಿ 15 ಕುಟುಂಬಗಳು ಪುನಃ ಬಿಟ್ಟು ಹೋದ ಮನೆಗಳಿಗೆ ಮಾಪಸ್ಸು ಬಂದು ವಾಸ ಮಾಡುತ್ತಿದ್ದಾರೆ, ಉಳಿದ 7 ಕುಟುಂಬಗಳು ಸಹ ಪುನರ್ ಆಗಮಿಸುವ ನಿರೀಕ್ಷೆಯಿದೆ ಎಂದು ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಕೋಲಾರ ವರದಿ ಮಾಡಿರುತ್ತಾರೆ.

ಗೋವಾದಿಂದ ಹೈದರಾಬಾದ್‌ಗೆ ರಾಜ್ಯದ ಮೂಲಕ ಹಾದು ಹೋಗುವ ಅನಿಲ ಕೊಳವೆ ಮಾರ್ಗದ ಯೋಜನೆಗೆ ಬಳಕೆಯಾಗಿರುವ ಭೂಮಿ ಬಗ್ಗೆ

416(701) ಶ್ರೀ ರಾಮದಾಸ್. ಎ (ಕೃಷ್ಣರಾಜ): ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಮೆ: ಗ್ಯಾಸ್ ಟ್ರಾನ್ಸ್‌ಪೋರ್ಟೇಶನ್ ಮತ್ತು ಇನ್‌ಫಾಸ್ಟ್ರಕ್ಚರ್ ಕಂಪನಿಯು ಗೋವಾದಿಂದ ಹೈದರಾಬಾದ್‌ಗೆ ರಾಜ್ಯದ ಮೂಲಕ ಹಾದು ಹೋಗುವ ಅನಿಲ ಕೊಳವೆ ಮಾರ್ಗ ನಿರ್ಮಿಸುವ ಯೋಜನೆಗೆ ಅವಕಾಶ ನೀಡಿದೆಯೇ?

ಆ. ಈ ಮಾರ್ಗದ ಉದ್ದವೆಷ್ಟು; ಇದರಿಂದ ರಾಜ್ಯದ ಎಷ್ಟು ಎಕರೆಯ ಭೂಮಿ ಬಳಕೆಯಾಗಲಿದೆ, ರಾಜ್ಯದ ಯಾವ ಯಾವ ಜಿಲ್ಲೆಗಳ ಮೂಲಕ ಕೊಳವೆ ಮಾರ್ಗ ಹಾದುಹೋಗಲಿದೆ?

ಇ. ಈ ನಿರ್ಮಾಣ ಯೋಜನೆ ಸಿದ್ದತೆಗಾಗಿ ಪೂರ್ವ ಬಾವಿ ಸಭೆ ನಡೆಸಾಗಿದೆಯೇ, ಇದು ಅಪಾಯಕಾರಿ ಯೋಜನೆಯಲ್ಲಿವೆ, ಯಾವ ಸ್ವರೂಪದ ಅನಿಲವನ್ನು ಸಾಗಿಸಲು ಉದ್ದೇಶಿಸಲಾಗಿದೆ.

ಈ. ಇದರ ರಕ್ಷಣೆಗೆ ಸರ್ಕಾರ ಯಾವ ಮುಂಜಾಗರೂಕತೆ ಕ್ರಮ ಕೈಗೊಂಡಿದೆ ಹಾಗೂ ಸುರಕ್ಷಿತೆಗಾಗಿ ಸರ್ಕಾರ ಕಂಪನಿಗೆ ಯಾವ ನಿರ್ಭಂದಗಳನ್ನು ವಿಧಿಸಲಾಗಿದೆ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ಹೌದು

ಆ. ಈ ಮಾರ್ಗದ ಉದ್ದವು 660 ಕಿ.ಮೀ.ಗಳಾಗಿದ್ದು ರಾಜ್ಯದಲ್ಲಿ ಬೆಳಗಾಂ, ಬಿಜಾಪುರ ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ 171 ಕಿ.ಮೀ. ಗಳ ಉದ್ದಳತೆ ಇರುತ್ತದೆ. ಪೆಟ್ರೋಲಿಯಂ ಮತ್ತು ಖನಿಜ ವಸ್ತುಗಳ ಕಾಯಿದೆಯಂತೆ ಪೈಪ್ ಲೈನ್ ಅಳವಡಿಸಲು ಯೋಜನೆಗೆ ಭೂಮಿ ಉಪಯೋಗಿಸುವ ಹಕ್ಕನ್ನು ಮಾತ್ರ ನೀಡಲಾಗುವುದು. ಪೈಪ್ ಲೈನ್ ಹಾದಿಯಲ್ಲಿ ಕೆಲವು ಕಡೆ ಮಧ್ಯಂತರ ಸೌಕರ್ಯಗಳಾದ ವಾಲ್ವ್ ರಿಪೀಟರ್ ಸ್ಟೇಷನ್ಸ್ ಗಳನ್ನು ಸ್ಥಾಪಿಸಲು ಸ್ವಲ್ಪ ಜಮೀನನ್ನು ಮಾತ್ರ ನೀಡಲಾಗುವುದು.

ಇ. ರಾಜ್ಯ ಉನ್ನತ ಮಟ್ಟದ ಸಮಿತಿಯು ಅನುಮೋದನೆ ನೀಡುವ ಮೊದಲು ಯೋಜನೆಯನ್ನು ಸ್ಕ್ರೀನಿಂಗ್ ಕಮಿಟಿಯು ಕೂಲಂಕುಷವಾಗಿ ಪರಿಶೀಲಿಸಿರುತ್ತದೆ. ಯೋಜನೆಯ ಪ್ರವರ್ಗಕರುಗಳಿಗೆ ಸಂಬಂಧಪಟ್ಟ ಕಾಯಿದೆ ಮತ್ತು ನಿಯಮಾವಳಿಗಳಂತೆ ಜಾಗರೂಕತಾ: ಸುರಕ್ಷಿತ, ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಗಿರುತ್ತದೆ. ಪೈಪ್ ಲೈನ್ ಮುಖಾಂತರ ಕೃತಕ ಅನಿಲ ಮತ್ತು ಹೈಡ್ರೋಕಾರ್ಬನ್‌ಗಳನ್ನು ಸಾಗಣೆ ಮಾಡಲಾಗುವುದು.

ಈ. ಕಾಯಿದೆ ಮತ್ತು ನಿಯಮಾವಳಿಗಳಂತೆ ಕರ್ನಾಟಕ ರಾಜ್ಯ ಪರಿಸರ ನಿಯಂತ್ರಣ ಮಂಡಳಿ ಪರಿಸರ ಮಾಲಿನ್ಯ ಇಲಾಖೆಗಳಿಂದ ಒಪ್ಪಿಗೆ ಪಡೆಯಲು ಘಟಕಕ್ಕೆ ನಿರ್ದೇಶನ ನೀಡಲಾಗಿದೆ. ಪೈಪ್ ಲೈನ್ ಹೋಗುವ ಸ್ಥಳದಲ್ಲಿ ಸಾರ್ವಜನಿಕ ಸಂಪರ್ಕ ಸಭೆಗಳಲ್ಲಿ ನಡೆಸಲಾಗುವುದು. ಘಟಕವು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಸಹ ಒಪ್ಪಿಗೆ ಪಡೆಯಲು ಸೂಚಿಸಲಾಗಿದೆ.

ಕ್ರೈಸ್ತರ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿ

417(702) ಶ್ರೀ ರಾಮದಾಸ್ ಎ. (ಕೃಷ್ಣರಾಜ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿರುವ ಮುಸ್ಲೀಂ ಮತ್ತು ಕ್ರೈಸ್ತರ ಜನಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

ಆ. ಈ ಮತಗಳ ಜನರಿಗಾಗಿ ಸರ್ಕಾರವು ಜಾರಿಗೆ ತಂದಿರುವ ಕಾರ್ಯಕ್ರಮಗಳಾವುವು;

ಇ. ಕ್ರೈಸ್ತರ ಅಭಿವೃದ್ಧಿಗಾಗಿ ಪ್ರತ್ಯೇಕ ಮಂಡಳಿಯನ್ನು ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇಲ್ಲದಿದ್ದಲ್ಲಿ, ಕಾರಣಗಳೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. 1991ರ ಜನಗಣತಿ ಪ್ರಕಾರ ಇವರ ಜನಸಂಖ್ಯೆ ಕೆಳಕಂಡಂತೆ ಇರುತ್ತದೆ.

ಮುಸ್ಲೀಂ - 52.34 ಲಕ್ಷಗಳು

ಕ್ರೈಸ್ತರು - 8.59 ಲಕ್ಷಗಳು

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ವಿವರಿಸಿದೆ)

ಆ. ಈ ಸಮುದಾಯದ ಜನರಿಗಾಗಿ ಸರ್ಕಾರ ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಇ. ಇಂತಹ ಪ್ರಸ್ತಾವನೆ ಯಾವುದು ಇರುವುದಿಲ್ಲ.

Annexure-1

District population Details of Muslim & Christian Community

Sl	District	Muslims	Chirstians
1	2	3	4
1	Bangalore (U)	634991	274900
2	Bangalore (R)	144337	6559
3	Bellary	207962	11418
4	Belgaum	363118	15810
5	Bidar	201978	39539
6	Bijapur	240950	692
7	Bagalkote	151028	2117